# ಶ್ರೀ ಮಡಿಯಾಲ ನಾರಾಯಣ ಭಟ್ಟರ 'ಅಧ್ಯಾಪಕರಿಗೆ ದಾರಿದೀಪ' ಕೃತಿಯ ವಿಶ್ಲೇಷಣೆ

**ನವೀನ್ ಕುಮಾರ್ ಆರ್.ಎ.[1] & ಮಂಜುನಾಥ[2]**

[1]ಸಂಶೋಧನ ವಿದ್ಯಾರ್ಥಿ, ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ನವನಿಹಾಳ ಗ್ರಾಮ, ಕಲಬುರ್ಗಿ ಜಿಲ್ಲೆ.

[2]ಮುಖ್ಯಸ್ಥರು ಭಾಷಾ ವಿಭಾಗ, ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ನವನಿಹಾಳ ಗ್ರಾಮ, ಕಲಬುರ್ಗಿ ಜಿಲ್ಲೆ.

**DOI: https://doi.org/10.5281/zenodo.18816785**

## ABSTRACT:

ಈ ಸಂಶೋಧನಾ ಲೇಖನವು ದಿ. ಮಡಿಯಾಲ ನಾರಾಯಣಭಟ್ಟರ ಶಿಕ್ಷಣ ಚಿಂತನೆಗಳನ್ನು ಆಧಾರವಾಗಿ ತೆಗೆದುಕೊಂಡು, ಅಧ್ಯಾಪಕರ ಪಾತ್ರ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಮಹತ್ವವನ್ನು ವಿಶ್ಲೇಷಿಸುತ್ತದೆ. ಅಧ್ಯಾಪಕರಿಗೊಂದು ದಾರಿದೀಪ ಎಂಬ ಕೃತಿಯಲ್ಲಿ ಭಟ್ಟರು ಪ್ರತಿಪಾದಿಸಿರುವ ಶೀಲ, ಸಂಸ್ಕೃತಿ ಮತ್ತು ನೈತಿಕತೆಯ ಮೇಲಾಧಾರಿತ ಶಿಕ್ಷಣ ತತ್ವವು ಇಂದಿನ ಶಿಕ್ಷಣ ವ್ಯವಸ್ಥೆಯ ಸಂಕಷ್ಟಗಳಿಗೆ ಸೂಕ್ತ ಪರಿಹಾರವನ್ನು ನೀಡುತ್ತದೆ. ಶಿಕ್ಷಣ ಸಂಸ್ಥೆಗಳ ಸಂಖ್ಯಾತ್ಮಕ ವೃದ್ಧಿಯ ನಡುವೆಯೂ ವಿದ್ಯಾರ್ಥಿಗಳ ಬೌದ್ಧಿಕ, ನೈತಿಕ ಮತ್ತು ಸಾಂಸ್ಕೃತಿಕ ಗುಣಮಟ್ಟ ಕುಸಿಯುತ್ತಿರುವುದನ್ನು ಲೇಖಕರು ಗಂಭೀರವಾಗಿ ಗಮನಿಸುತ್ತಾರೆ. ಈ ಸ್ಥಿತಿಗೆ ಪ್ರಮುಖ ಕಾರಣವೆಂದರೆ ಯೋಗ್ಯ, ಧ್ಯೇಯನಿಷ್ಠ ಹಾಗೂ ಶೀಲಸಂಪನ್ನ ಅಧ್ಯಾಪಕರ ಕೊರತೆ. ಈ ಲೇಖನದಲ್ಲಿ ಅಧ್ಯಾಪಕನನ್ನು ಕೇವಲ ಪಾಠ ಬೋಧಕನಾಗಿ ಅಲ್ಲದೆ, ರಾಷ್ಟ್ರಶಿಲ್ಪಿ, ಜನಮನದ ರೂಪಶಿಲ್ಪಿ ಮತ್ತು ನೈತಿಕ ಜಾಗೃತಿಯ ಸಾರಥಿಯಾಗಿ ಪರಿಗಣಿಸಲಾಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಅಧ್ಯಾಪಕರ ಪ್ರಭಾವವು ಪೋಷಕರು ಮತ್ತು ಸಮಾಜಕ್ಕಿಂತಲೂ ಹೆಚ್ಚಾಗಿದೆ ಎಂಬ ತತ್ವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರೀತಿ, ಸಹಾನುಭೂತಿ, ಕ್ಷಮೆ, ಶಿಸ್ತು ಮತ್ತು ಆದರ್ಶಯುತ ಜೀವನವನ್ನು ಅನುಸರಿಸುವ ಅಧ್ಯಾಪಕರೇ ವಿದ್ಯಾರ್ಥಿಗಳಲ್ಲಿ ಸಂಸ್ಕಾರ, ದೇಶಪ್ರೇಮ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸಲು ಸಮರ್ಥರಾಗುತ್ತಾರೆ ಎಂಬುದೇ ಈ ಕೃತಿಯ ಕೇಂದ್ರ ಆಶಯ.

## KEYWORDS:

ಮೌಲ್ಯಾಧಾರಿತ ಶಿಕ್ಷಣ, ಅಧ್ಯಾಪಕರ ಪಾತ್ರ, ರಾಷ್ಟ್ರ ನಿರ್ಮಾಣ, ವಿದ್ಯಾರ್ಥಿ ಧರ್ಮ ಮತ್ತು ನೈತಿಕತೆ, ಮಡಿಯಾಲ ನಾರಾಯಣ ಭಟ್ಟರ ಶಿಕ್ಷಣ ಚಿಂತನೆ.

**ಪರಿಚಯ:**

ಶಿಕ್ಷಣವು ಯಾವುದೇ ರಾಷ್ಟ್ರದ ಬೌದ್ಧಿಕ, ನೈತಿಕ ಮತ್ತು ಸಾಂಸ್ಕೃತಿಕ ಶಕ್ತಿಯ ಮೂಲವಾಗಿದೆ. ಪ್ರಾಚೀನ ಭಾರತದಲ್ಲಿ ಶಿಕ್ಷಣವು ಜೀವನಮೌಲ್ಯಗಳು, ಶಿಸ್ತು ಮತ್ತು ಸಂಸ್ಕಾರಗಳೊಂದಿಗೆ ಸಮನ್ವಯಗೊಂಡಿದ್ದರೆ, ಇಂದಿನ ಶಿಕ್ಷಣ ವ್ಯವಸ್ಥೆ ಬಹುತೇಕ ಉದ್ಯೋಗಮುಖಿ ಮತ್ತು ಅಂಕಕೇಂದ್ರಿತವಾಗಿರುವುದು ಸ್ಪಷ್ಟವಾಗಿದೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ಜ್ಞಾನವಿದ್ದರೂ, ಶೀಲ, ನೈತಿಕತೆ ಮತ್ತು ದೇಶಪ್ರೇಮದ ಕೊರತೆ ಕಾಣಿಸುತ್ತಿದೆ. ದಿ. ಮಡಿಯಾಲ ನಾರಾಯಣ ಭಟ್ಟರು ತಮ್ಮ ಅಧ್ಯಾಪಕರಿಗೊಂದು ದಾರಿದೀಪ ಕೃತಿಯಲ್ಲಿ ಈ ಸಮಸ್ಯೆಯನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಅವರ ದೃಷ್ಟಿಯಲ್ಲಿ ಅಧ್ಯಾಪಕನು ಕೇವಲ ಪಾಠ ಹೇಳುವವನು ಅಲ್ಲ; ಅವನು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಶಿಲ್ಪಿ. ದಿ. ಮಡಿಯಾಲ ನಾರಾಯಣ ಭಟ್ಟರ ಅಧ್ಯಾಪಕರಿಗೊಂದು ದಾರಿದೀಪ ಕೃತಿಯಲ್ಲಿರುವ ಲೇಖನಗಳು, ಚಿಂತನೆಗಳು ಮತ್ತು ಸಂದೇಶಗಳನ್ನು ಮುಖ್ಯ ಆಧಾರವಾಗಿ ಬಳಸಲಾಗಿದೆ. ಜೊತೆಗೆ ಭಾರತೀಯ ಶಿಕ್ಷಣ ತತ್ವ ಮತ್ತು ಮೌಲ್ಯಾಧಾರಿತ ಶಿಕ್ಷಣ ಕುರಿತ ಸಿದ್ಧಾಂತಗಳನ್ನು ವಿಶ್ಲೇಷಿಸಲಾಗಿದೆ.

ಈ ಕೃತಿಯು ಶ್ರೀ ಮಡಿಯಾಲ ನಾರಾಯಣ ಭಟ್ಟರ ಶೈಕ್ಷಣಿಕ ಮತ್ತು ಸಮಾಜ ಸೇವೆಗೆ ಸಂಬಂಧಿಸಿದ ಚಿಂತನೆಗಳ ಸಂಗ್ರಹವಾಗಿದೆ. ಶಿಕ್ಷಣ ರಂಗಕ್ಕೆ ಹೊಸ ಬೆಳಕನ್ನು ಚೆಲ್ಲುವ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ಶೀಲ ಸಂಸ್ಕೃತಿಯ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳುತ್ತದೆ. ಮತ್ತು ದೇಶದ ಪ್ರಗತಿಗಾಗಿ ಉತ್ತಮ ಅಧ್ಯಾಪಕರ ಪಾತ್ರದ ಬಗ್ಗೆ ವಿವರಿಸುತ್ತದೆ. ದೇಶದಲ್ಲಿ ವಿದ್ಯಾಮಂದಿರಗಳ ಸಂಖ್ಯೆ ಹೆಚ್ಚುತ್ತಿದ್ದರೂ, ಅಲ್ಲಿಂದ ಹೊರಬರುವ ವಿದ್ಯಾರ್ಥಿಗಳ ಯೋಗ್ಯತೆಯು ಅಪೇಕ್ಷಣೀಯ ಮಟ್ಟದಲ್ಲಿಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಕೆಳಮಟ್ಟದಲ್ಲಿ, ಸಾಂಸ್ಕೃತಿಕವಾಗಿ ಶೂನ್ಯವಾಗಿ ಮತ್ತು ನೈತಿಕವಾಗಿ ಸಮಸ್ಯೆಯಾಗಿರುತ್ತಾರೆ. ರಾಷ್ಟ್ರಕ್ಕೆ ಭವ್ಯ ಸಂಪತ್ತಾಗಬಲ್ಲ ವಿದ್ಯಾರ್ಥಿಗಳನ್ನು ರೂಪಿಸಲು ವಿವಿಧ ಹಂತದ ವಿದ್ಯಾಸಂಸ್ಥೆಗಳಲ್ಲಿ ಅತ್ಯುತ್ತಮ ವಿದ್ಯಾಮಟ್ಟ ಮತ್ತು ಶೀಲ ಸಂಪನ್ನತೆಯನ್ನು ಮಕ್ಕಳಿಗೆ ನೀಡಲು ಶಕ್ತ ಹಾಗೂ ನುರಿತ ಉಪಾಧ್ಯಾಯರಿಂದ ಮಾತ್ರ ಸಾಧ್ಯ. ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಯ ಕೀಳುಭಾಗಗಳನ್ನು ಅಳವಡಿಸಿಕೊಳ್ಳುವುದರ ಬದಲು ಭಾರತೀಯ ಸನಾತನ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವಂತೆ ಮಾಡಬೇಕು. ಈ ಕಾರ್ಯಕ್ಕೆ ತರಬೇತಿ ಹೊಂದಿದ ಉಪಾಧ್ಯಾಯರೇ ಹೆಚ್ಚು ಸಮರ್ಥರು. ನ್ಯಾಯ, ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ, ಅಳವಡಿಸಿಕೊಳ್ಳುವಂತೆ ತರಬೇತಿ ನೀಡಬೇಕು. ಆದ್ದರಿಂದ, ಉಪಾಧ್ಯಾಯನ ಸ್ಥಾನವು ದೇಶದ ಬೆನ್ನೆಲುಬು, ಜೀವನಾಡಿ ಮತ್ತು ಸೂತ್ರ ಚಾಲಕನಂತಿದೆ. ಉತ್ತಮ ಉಪಾಧ್ಯಾಯರು ದೊರೆಯಬೇಕಿದ್ದರೆ ಅವರ ವೇತನದ ಮಟ್ಟವನ್ನು ಹೆಚ್ಚಿಸಿ ಪ್ರತಿಭಾನ್ವಿತರು ಆಕರ್ಷಿತರಾಗುವಂತೆ ಮಾಡಬೇಕು ಮತ್ತು ಸಮಾಜದಲ್ಲಿ ಅವರಿಗೆ ಅತ್ಯುತ್ತಮ ಗೌರವದ ಸ್ಥಾನ ಸಿಗುವಂತೆ ಮಾಡಬೇಕು.

ಪ್ರಾಚೀನ ಭಾರತದಲ್ಲಿ ಆಚಾರ್ಯರ ಸ್ಥಾನ ದೊಡ್ಡದಾಗಿತ್ತು ಮತ್ತು ಆಗ ಸಮಾಜದಲ್ಲಿ ಶಾಂತಿ, ಸಮರಸ, ಸಮೃದ್ಧಿಗಳಿದ್ದವು. ಇಂದಿನ ಅಧ್ಯಾಪಕನ ಸ್ಥಾನ

ಗಣನೀಯವಾಗಿಲ್ಲ ಮತ್ತು ಸಮಾಜದಲ್ಲಿ ಸಮಸ್ಯೆಗಳಿವೆ. ರಾಷ್ಟ್ರದ ಭವಿಷ್ಯ ಅಧ್ಯಾಪಕರ ವ್ಯಕ್ತಿತ್ವ ಮತ್ತು ಸಾಮರ್ಥ್ಯವನ್ನು ಅವಲಂಬಿಸಿದೆ. ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಹೆತ್ತವರು ಮತ್ತು ವಾತಾವರಣಕ್ಕಿಂತ ಅಧ್ಯಾಪಕರ ಪ್ರಭಾವವೇ ಹೆಚ್ಚು. ಅಧ್ಯಾಪಕನು ಮಕ್ಕಳ ಕುತೂಹಲ ಕೆರಳಿಸಿ, ಬೌದ್ಧಿಕ ವಿಕಾಸ ಸಾಧಿಸುವವನು. ಉತ್ತಮ ಚಾರಿತ್ರ್ಯವುಳ್ಳ ಧ್ಯೇಯವಾದಿಗಳಾದ, ಸಮರ್ಥ ಅಧ್ಯಾಪಕರ ದೊಡ್ಡ ಸೇನೆಯನ್ನು ಕಟ್ಟಬೇಕಾಗಿದೆ. "ನಾನೊಬ್ಬ ಬಡ ಅಧ್ಯಾಪಕ" ಎಂದು ತಮ್ಮನ್ನು ತಾವು ಕೀಳಾಗಿಸುವ ಮನೋಭಾವದವರು ಅಧ್ಯಾಪಕರಾಗಬಾರದು. "ನಾನು ರಾಷ್ಟ್ರ ಪುನರ್ನಿರ್ಮಾಣದ ಪುಣ್ಯ ಕಾರ್ಯ ಮಾಡುತ್ತಿದ್ದೇನೆ" ಎಂದು ಅಭಿಮಾನಪಡುವವನೇ ಈ ವೃತ್ತಿಯನ್ನು ಕೈಗೊಳ್ಳಬೇಕು.

**"ಶ್ರೀಮಂತ ಪುತ್ರರು ಉಪಾಧ್ಯಾಯರಾಗಿರಿ":** ಈ ಪ್ರಬಂಧವು ಭಾರತೀಯ ಶಿಕ್ಷಣ ವ್ಯವಸ್ಥೆಯ ಸದ್ಯದ ಸ್ಥಿತಿಯನ್ನು ವಿಶ್ಲೇಷಿಸಿ, ರಾಷ್ಟ್ರ ನಿರ್ಮಾಣದಲ್ಲಿ ಉಪಾಧ್ಯಾಯರ ಪಾತ್ರವನ್ನು ಪುನಃ ಮೌಲ್ಯಮಾಪನ ಮಾಡುವ ಮಹತ್ವದ ಚಿಂತನೆ. ಲೇಖಕರು ಶಿಕ್ಷಣದ ವ್ಯಾಪಕ ವಿಸ್ತರಣೆಗಿಂತ ಅದರ ಗುಣಮಟ್ಟದ ಕುಸಿತದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಇಂದಿನ ಶಾಲೆಗಳು ಮತ್ತು ಕಾಲೇಜುಗಳು ಸಂಖ್ಯೆಯಲ್ಲಿ ಹೆಚ್ಚಾದರೂ, ಅವುಗಳಿಂದ ಹೊರಬರುವ ವಿದ್ಯಾರ್ಥಿಗಳ ಬೌದ್ಧಿಕ, ನೈತಿಕ ಹಾಗೂ ಸಾಂಸ್ಕೃತಿಕ ಮಟ್ಟ ತೀರಾ ಅಪೇಕ್ಷಣೀಯವಾಗಿದೆ. ಇದರ ಮೂಲ ಕಾರಣವೆಂದರೆ – ಯೋಗ್ಯ, ಶೀಲಸಂಪನ್ನ ಹಾಗೂ ಧ್ಯೇಯನಿಷ್ಠ ಉಪಾಧ್ಯಾಯರ ಕೊರತೆ. ಲೇಖಕರು ಉಪಾಧ್ಯಾಯನನ್ನು ಕೇವಲ ಬೋಧಕನಾಗಿ ಅಲ್ಲದೆ, 'ರಾಷ್ಟ್ರದ ಶಿಲ್ಪಿ', 'ಜನಮನದ ರೂಪಶಿಲ್ಪಿ' ಮತ್ತು ನೈತಿಕ ಜಾಗೃತಿಯ ಸಾರಥಿಯಾಗಿ ಪರಿಗಣಿಸುತ್ತಾರೆ. ಅವರ ದೃಷ್ಟಿಯಲ್ಲಿ ಯಾವುದೇ ರಾಷ್ಟ್ರದ ಭವಿಷ್ಯವು ಶಾಲಾ ತರಗತಿಗಳಲ್ಲೇ ರೂಪುಗೊಳ್ಳುತ್ತದೆ.

"ಶ್ರೀಮಂತರು ಅಥವಾ ಆರ್ಥಿಕವಾಗಿ ಸುಸ್ಥಿತಿಯ ಯುವಕರು ಉಪಾಧ್ಯಾಯ ವೃತ್ತಿಗೆ ಬರಬೇಕು" ಎಂಬುದು. ಕಾರಣ, ಆರ್ಥಿಕ ಬಾಧೆಗಳಿಂದ ಮುಕ್ತರಾಗಿರುವವರು ಶುದ್ಧ ಸೇವಾ ಮನೋಭಾವನೆಯಿಂದ ಬೋಧನೆಗೆ ತೊಡಗಿಸಿಕೊಳ್ಳಬಹುದು. ಅವರು ವೇತನಕ್ಕಿಂತಲೂ ಧರ್ಮಬೋಧನೆ, ಸಂಸ್ಕಾರಸಂರಕ್ಷಣೆ ಮತ್ತು ರಾಷ್ಟ್ರಸೇವೆ ಎಂಬ ಉನ್ನತ ಧ್ಯೇಯದ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಬಲ್ಲರು. ಈ ವಾದವು ಶಿಕ್ಷಣವನ್ನು ಪವಿತ್ರ ಸೇವೆಯಾಗಿ ಪರಿಗಣಿಸುವ ತತ್ವಕ್ಕೆ ನಿಷ್ಠಾವಂತವಾಗಿದೆ. ಲೇಖಕರು ಉಪಾಧ್ಯಾಯ ವೃತ್ತಿಯನ್ನು ಆಧ್ಯಾತ್ಮಿಕ ಜೀವನದ ಮಾರ್ಗವಾಗಿ ಚಿತ್ರಿಸುತ್ತಾರೆ.

**"ಇವರೇ ರಾಷ್ಟ್ರದ ನವನೀತ":** ಈ ಲೇಖನವು ಅಧ್ಯಾಪಕರ ಮಹತ್ವ ಅವರ ಸಾಮಾಜಿಕ ಹೊಣೆಗಾರಿಕೆ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಪಾತ್ರವನ್ನು ವಿವರಿಸುವ ಶ್ರೇಷ್ಠ ಚಿಂತನೆ. ಲೇಖಕರ ಅಭಿಪ್ರಾಯದಲ್ಲಿ "ಅಧ್ಯಾಪಕರೇ ರಾಷ್ಟ್ರದ ನವನೀತ", ಅಂದರೆ ಸಮಾಜದ ಶ್ರೇಷ್ಠ ಮತ್ತು ಶುದ್ಧ ಅಂಶ. ಅವರು ಮಕ್ಕಳ ಮನಸ್ಸು ರೂಪಿಸುವ ಮೂಲಕ ಭವಿಷ್ಯದ ರಾಷ್ಟ್ರವನ್ನು ಕಟ್ಟುತ್ತಾರೆ. ಪ್ರಾಚೀನ ಭಾರತದಲ್ಲಿ

'ಆಚಾರ್ಯ ಸ್ಥಾನ' ಅತ್ಯುನ್ನತವಾಗಿತ್ತು. ಆದರೆ ಇಂದಿನ ಕಾಲದಲ್ಲಿ ಅಧ್ಯಾಪಕರ ಗೌರವ ಕುಸಿದಿರುವುದರಿಂದ ಸಮಾಜದ ಮೌಲ್ಯಗಳು ದುರ್ಬಲವಾಗಿವೆ. ಈ ಸ್ಥಿತಿಯನ್ನು ಸರಿಪಡಿಸಲು ಅಧ್ಯಾಪಕರು ತಮ್ಮ ಕರ್ತವ್ಯದಲ್ಲಿ ಪ್ರಾಮಾಣಿಕತೆ, ನಿಷ್ಠೆ ಮತ್ತು ಆತ್ಮಗೌರವವನ್ನು ಬೆಳೆಸಿಕೊಳ್ಳಬೇಕು ಎಂದು ಲೇಖಕರು ಒತ್ತಿಹೇಳುತ್ತಾರೆ. ಮಕ್ಕಳ ಜೀವನ ರೂಪಣೆಯಲ್ಲಿ ಪೋಷಕರು ಅಥವಾ ಸಮಾಜಕ್ಕಿಂತಲೂ ಅಧ್ಯಾಪಕರ ಪ್ರಭಾವವೇ ಹೆಚ್ಚು. ಅವರ ಚಾರಿತ್ರ್ಯ, ನಡತೆ ಮತ್ತು ಪ್ರೀತಿ ವಿದ್ಯಾರ್ಥಿಗಳ ಜೀವನವನ್ನು ಬೆಳಗಿಸುತ್ತದೆ. ಆದ್ದರಿಂದ ಅಧ್ಯಾಪಕನು ಕೇವಲ ಬೋಧಕನಲ್ಲ – ಅವನು ರಾಷ್ಟ್ರ ಶಿಲ್ಪಿ. ಲೇಖಕರು ಟ್ಯೂಷನ್ ಮೂಲಕ ಹಣ ಗಳಿಸುವ ಮನೋಭಾವವನ್ನು ಖಂಡಿಸಿ, ಬೋಧನೆ ಎಂಬುದು ಪುಣ್ಯಕಾರ್ಯ, ರಾಷ್ಟ್ರಸೇವೆ ಎಂಬ ನಿಲುವನ್ನು ಉನ್ನತಗೊಳಿಸುತ್ತಾರೆ.

**"ಉಪಾಧ್ಯಾಯ ಹೇಗಿರಬೇಕು":** ಉಪಾಧ್ಯಾಯನಾದವನಿಗೆ ಅತ್ಯಂತ ಮುಖ್ಯವಾದ ಗುಣ ಮಕ್ಕಳ ಮೇಲಿನ ಪ್ರೇಮ ಮತ್ತು ಸಹಾನುಭೂತಿ. ಒಬ್ಬ ಉತ್ತಮ ಉಪಾಧ್ಯಾಯನು ವಿದ್ಯಾರ್ಥಿಗಳ ಜೀವನ ಹಿನ್ನೆಲೆ, ಕುಟುಂಬದ ಪರಿಸ್ಥಿತಿ, ಮಾನಸಿಕ ಸ್ಥಿತಿ, ಸಾಮಾಜಿಕ ವಾತಾವರಣ ಇವೆಲ್ಲವನ್ನು ತಿಳಿದುಕೊಂಡಿರಬೇಕು. ವಿದ್ಯಾರ್ಥಿಯು ತಪ್ಪು ಮಾಡಿದಾಗ ಅಸಹನೆಯಿಂದ ಪ್ರತಿಕ್ರಿಯಿಸದೆ, ಸಹಾನುಭೂತಿಯಿಂದ ವಿಚಾರಿಸಿ ಮಾರ್ಗದರ್ಶನ ನೀಡುವುದು ಮುಖ್ಯ. ಮಕ್ಕಳಲ್ಲಿ ಪ್ರೀತಿಯನ್ನು ಬೆಳೆಸಿದರೆ ಅವರು ಉಪಾಧ್ಯಾಯರ ಮಾತುಗಳಿಗೆ ಗಮನಕೊಟ್ಟು ಪಾಠವನ್ನು ಸರಿಯಾಗಿ ಗ್ರಹಿಸುತ್ತಾರೆ. ಕೆಲವೊಮ್ಮೆ ವಿದ್ಯಾರ್ಥಿಯ ದುರ್ವ್ಯವಹಾರದ ಹಿಂದಿನ ಕಾರಣವನ್ನು ಅರಿತರೆ, ಅವರಲ್ಲಿ ಕರುಣೆ ಮತ್ತು ಪರಿವರ್ತನೆ ಮೂಡುತ್ತದೆ. ಪ್ರೀತಿ ಮತ್ತು ಸಹಾನುಭೂತಿ ಶಿಕ್ಷೆಗಿಂತ ಹೆಚ್ಚು ಪರಿಣಾಮಕಾರಿ. ಉಪಾಧ್ಯಾಯನು ಎಲ್ಲರಿಗೂ ಒಂದೇ ರೀತಿಯ ಶಿಕ್ಷೆ ನೀಡಬಾರದು. ವಿದ್ಯಾರ್ಥಿಯ ಮನೋಭಾವಕ್ಕೆ ಅನುಗುಣವಾಗಿ ಕ್ರಮ ಕೈಗೊಳ್ಳಬೇಕು. ಶಿಕ್ಷೆಯ ಉದ್ದೇಶ ಶಿಕ್ಷೆಯಲ್ಲ, ವ್ಯಕ್ತಿತ್ವ ಪರಿವರ್ತನೆಯಾಗಿರಬೇಕು.

**ಅಧ್ಯಾಪಕರಿಗೆ ಸಂದೇಶ:** ಈ ಲೇಖನವು ಒಬ್ಬ ಉತ್ತಮ ಅಧ್ಯಾಪಕನಾದವನಲ್ಲಿ ಇರಬೇಕಾದ ಗುಣಗಳು, ಜವಾಬ್ದಾರಿ ಮತ್ತು ನಡವಳಿಕೆಗಳ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶನ ನೀಡುತ್ತದೆ. ಅಧ್ಯಾಪಕನಿಗೆ ಜಡತೆ ಇರಬಾರದು. ಅವನು ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಸದಾ ಯೋಚಿಸಬೇಕು. ಅಧ್ಯಾಪಕನ ಸ್ಥಾನಮಾನಕ್ಕಿಂತ ಕೆಲಸದ ನಿಷ್ಠೆ ಮುಖ್ಯ. ಪ್ರೀತಿ, ಕಳಕಳಿ, ಜವಾಬ್ದಾರಿ ಇವು ಅವನಿಗೆ ಅವಿಭಾಜ್ಯ ಗುಣಗಳು. ಅಧ್ಯಾಪಕರಲ್ಲಿ ಎರಡು ವಿಧದವರು – ಕೆಲವರು ತುಂಬಾ ಸಡಿಲಧೋರಣೆಯವರು, ಕೆಲವರು ಕಠಿಣದವರು ಆಗಿದ್ದಾರೆ. ಇವೆರಡೂ ತಪ್ಪು. ಮಧ್ಯಮ ಮಾರ್ಗ, ಅಂದರೆ ಪ್ರೀತಿ ಮತ್ತು ಶಿಸ್ತು ಎರಡನ್ನೂ ಸಮತೋಲನದಿಂದ ಬಳಸಬೇಕು. ಅಧ್ಯಾಪಕರು ಮಕ್ಕಳ ವಿದ್ಯಾಭ್ಯಾಸದ ಪ್ರಗತಿಯಲ್ಲಿ ಹಿಂದೆ ಬಿದ್ದವರ ಕಡೆ ಹೆಚ್ಚು ಗಮನಹರಿಸಬೇಕು. ಎಲ್ಲ ವಿದ್ಯಾರ್ಥಿಗಳಿಗೆ ಸಮಾನ ಪ್ರೀತಿ ತೋರಿಸಬೇಕು. ಕೆಲವು ಅಧ್ಯಾಪಕರು ಬುದ್ಧಿವಂತ ಮಕ್ಕಳನ್ನೇ ಹೆಚ್ಚು ನೋಡಿಕೊಳ್ಳುತ್ತಾರೆ. ಇದು ತಪ್ಪು ಎಲ್ಲ ಮಕ್ಕಳು ಹೆತ್ತವರ ವಿಶ್ವಾಸದಿಂದ ನಮ್ಮ ಬಳಿ ಬಂದಿದ್ದಾರೆ ಎಂಬ ಅರಿವು

ಇರಬೇಕು. ಮೇಲ್ವಿಚಾರಣೆ ಬಹಳ ಜವಾಬ್ದಾರಿಯ ಕೆಲಸ. ಇತರ ಅಧ್ಯಾಪಕರ ಜೊತೆ ಸಂವಾದ, ವಿಮರ್ಶೆ ಮಾಡುತ್ತಾ ಸ್ವಪ್ರಯತ್ನದಿಂದ ಕಾರ್ಯನಿರ್ವಹಿಸಬೇಕು.

**ವಿದ್ಯಾರ್ಥಿ–ಅಧ್ಯಾಪಕರ ಸಂಬಂಧ:** ಅಧ್ಯಾಪಕರು ವಿದ್ಯಾರ್ಥಿಗಳ ಜೀವನದ ದಿಕ್ಕು ತೋರಿಸುವವರು. ಅನ್ನದಾನಕ್ಕಿಂತ ವಿದ್ಯಾದಾನ ಶ್ರೇಷ್ಠ. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಪ್ರೇಮ, ಕಾಳಜಿ ಮತ್ತು ಆಸಕ್ತಿ ಇಟ್ಟು ಬೋಧನೆ ಮಾಡಿದರೆ ಮಾತ್ರ ಅವರಲ್ಲಿ ಒಳಿತು ಬೆಳೆಯುತ್ತವೆ. ತಿದ್ದುವಲ್ಲಿ ವಿಶ್ವಾಸ ಅಗತ್ಯ. ಒಳ್ಳೆಯ ಮಾತು, ಪ್ರಾರ್ಥನೆ, ಪವಿತ್ರ ವಾತಾವರಣ ಇವುಗಳಿಂದ ಮಕ್ಕಳ ಮನಸ್ಸಿನಲ್ಲಿ ಒಳ್ಳೆಯತನ ಮೂಡುತ್ತದೆ. ದ್ವೇಷವಿಲ್ಲದೆ, ಪ್ರೇಮದಿಂದ ಮಾಡಿದ ಬೋಧನೆ ಪರಿಣಾಮಕಾರಿ. ಅಧ್ಯಾತ್ಮದಲ್ಲಿ ಪ್ರೇಮವೇ ಸಾಧನವಾಗುತ್ತದೆ. ಈ ಪ್ರಬಂಧದಲ್ಲಿ ವಿದ್ಯಾರ್ಥಿ–ಅಧ್ಯಾಪಕರ ಸಂಬಂಧ ಮತ್ತು ವಿದ್ಯಾರ್ಥಿ ಧರ್ಮದ ಮಹತ್ವವನ್ನು ವಿವರಿಸಲಾಗಿದೆ. ಅಧ್ಯಾಪಕರು ಪ್ರೇಮ, ಕಾಳಜಿ, ವಿಶ್ವಾಸದಿಂದ ಬೋಧಿಸಿದರೆ ವಿದ್ಯಾರ್ಥಿಗಳಲ್ಲಿ ಒಳಿತು ಬೆಳೆಯುತ್ತದೆ.

**ವಿದ್ಯಾರ್ಥಿ ಧರ್ಮ:** ವಿದ್ಯಾರ್ಥಿಗಳು ದೇಶದ ಭವಿಷ್ಯ. ಅವರಲ್ಲಿ ಅಪಾರ ಶಕ್ತಿ, ಚೈತನ್ಯ ಇದೆ. ಆದರೆ ಮಾರ್ಗದರ್ಶನದ ಕೊರತೆ ಇದೆ. ಹಿರಿಯರು ಅವರಿಗಾಗಿ ಆದರ್ಶ ತೋರಿಸಬೇಕು. ಶಿಸ್ತು, ನಿಯಮಗಳಿಲ್ಲದ ಸಂಸ್ಥೆ ತಾತ್ಕಾಲಿಕ ಸುಖ ನೀಡಿದರೆ ಭವಿಷ್ಯ ಹಾಳು ಮಾಡುತ್ತದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಆಸೆ, ಪರಿಶ್ರಮ ಮತ್ತು ಉತ್ಸಾಹ ಅಗತ್ಯ. ಎಲ್ಲರೂ ಒಂದೇ ರೀತಿಯ ಬೌದ್ಧಿಕ ಮಟ್ಟದಲ್ಲಿರಲಾರರು; ಆದರೆ ಪ್ರಯತ್ನದಿಂದ ಎಲ್ಲರೂ ಪ್ರಗತಿ ಸಾಧಿಸಬಹುದು. "ಆಚಾರ್ಯ ದೇವೋ ಭವ" ಎಂಬ ವಾಕ್ಯ ಸತ್ಯ. ವಿದ್ಯಾರ್ಥಿಗಳು ಗುರುಗಳೆಡೆ ಗೌರವ, ಪ್ರೇಮ ಇಟ್ಟರೆ ಪಾಠದಲ್ಲಿ ಆಸಕ್ತಿ ಮೂಡುತ್ತದೆ. ಗುರುವಿಗೆ ಉತ್ಸಾಹ ಬರುತ್ತದೆ. ಗುರುಭಕ್ತಿಯಿಂದ ವಿನಯ, ಜ್ಞಾನ, ಶಾಂತಿ ಮತ್ತು ಭಗವಂತನ ಅನುಗ್ರಹ ದೊರೆಯುತ್ತದೆ.

ವಿದ್ಯಾರ್ಥಿಗಳು ತರಗತಿಯಲ್ಲಿ ಪಾಠದ ಕಡೆ ಏಕಾಗ್ರತೆಯಿಂದ ಲಕ್ಷ್ಯ ಕೊಡುವುದು ಅಗತ್ಯ. ಪಾಠ ತಪ್ಪಿಸಿಕೊಂಡರೆ ಮುಂದಿನ ಪಾಠ ಅರ್ಥವಾಗುವುದಿಲ್ಲ. ಎಡವಿದ ಹಾಜರಿ ವಿದ್ಯಾಭ್ಯಾಸದ ಶತ್ರು. ಅಧ್ಯಾಪಕರ ಸೂಚನೆಗಳಿಗೆ ವಿಧೇಯರಾಗಬೇಕು. ಮನೆಗೆಲಸವನ್ನು ನಿಯಮಿತವಾಗಿ ಮಾಡಿ, ಮುಂದಿನ ಪಾಠದ ಪೂರ್ವತಯಾರಿ ಮಾಡಿಕೊಳ್ಳಬೇಕು. ಇದು ಪಾಠದ ಅರ್ಥಗ್ರಹಣಕ್ಕೆ ನೇರವಾಗುತ್ತದೆ. ತಾವು ಕಲಿಯುತ್ತಿರುವ ವಿದ್ಯಾಸಂಸ್ಥೆಯ ಮೇಲೆ ಭಕ್ತಿ, ಪ್ರೀತಿ ಇರಬೇಕು.

**ವಿದ್ಯಾರ್ಥಿಗಳಿದ್ದಾರೆ! ಎಚ್ಚರಿಕೆ!:** ಈ ಲೇಖನವು ಇಂದು ವಿದ್ಯಾರ್ಥಿಗಳಲ್ಲಿನ ಉತ್ಸಾಹ, ಚೈತನ್ಯ ಮತ್ತು ಯೌವನ ಶಕ್ತಿಯ ದುರವಸ್ಥೆಯನ್ನು ಚಿಂತಿಸುವಂತಿದೆ. ವಿದ್ಯಾರ್ಥಿಗಳು ರಾಷ್ಟ್ರದ ನಿಜವಾದ ಬುನಾದಿ ಮತ್ತು ಮುಂದಿನ ನಾಯಕರು, ಅವರ ಚೈತನ್ಯವು ತಪ್ಪುದಾರಿ ಹಿಡಿದು ಹೋಗುತ್ತಿರುವುದನ್ನು ಲೇಖಕರು ಎಚ್ಚರಿಸುತ್ತಾರೆ. ಮೊದಲನೆಯದಾಗಿ, ವಿದ್ಯಾರ್ಥಿಗಳು ದೇಶದ ಭವಿಷ್ಯದ ಸ್ಥಾಪಕರು, ಉತ್ಸಾಹ ಮತ್ತು ಚೈತನ್ಯದ ಪ್ರವಾಹವಾಗಿದ್ದಾರೆ ಎಂದರೆ, ಅವರ ಚೈತನ್ಯವು ತಗ್ಗಿಹೋಗುತ್ತಿದ್ದು, ತಮ್ಮ ಯೌವನ ಶಕ್ತಿಯನ್ನು ತಪ್ಪು ದಾರಿಯಲ್ಲಿ ಬಳಸುತ್ತಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ

ಕಾರಣಗಳಾಗಿ ಭೌತಿಕ ವಿಲಾಸವಾದ, ವ್ಯಭಿಚಾರ, ಮಾದಕ ಪದಾರ್ಥಗಳು, ಅನಿಯಂತ್ರಿತ ಲೈಂಗಿಕ ಚಟುವಟಿಕೆಗಳು, ವಿದೇಶಗಳಲ್ಲಿ ಅನೈತಿಕ ತೊಳಲಾಟಗಳು ಮತ್ತು ಉತ್ತಮ ಮಾರ್ಗದರ್ಶನದ ಕೊರತೆಗಳನ್ನು ತಿಳಿಸಿದ್ದಾರೆ.

**ವಿದ್ಯಾರ್ಥಿಗಳ ಜೀವನ ಮೌಲ್ಯಗಳು:** ವಿದ್ಯಾರ್ಥಿಗಳ ಜೀವನದಲ್ಲಿ ಬೆಳೆಸಬೇಕಾದ ಪ್ರಮುಖ ಮೌಲ್ಯಗಳು ರಾಷ್ಟ್ರದ ಸರ್ವಾಂಗೀಣ ಪ್ರಗತಿಯ ಜೊತೆಗೆ ಅವರ ವೈಯಕ್ತಿಕ ಉನ್ನತಿಗೆ ಅನಿವಾರ್ಯ. ಇಂದಿನ ತೀವ್ರ ಬದಲಾವಣೆಗಳಲ್ಲಿರುವ ಸಮಾಜದಲ್ಲಿ ವಿದ್ಯಾರ್ಥಿಗಳಲ್ಲಿ ಅಶಾಂತಿ, ಅತೃಪ್ತಿ, ಇಂದ್ರಿಯಾಸಕ್ತಿಯ ವೃದ್ಧಿ ಕಾಣುತ್ತದೆ. ಈ ಅಶಾಂತಿ ದೂರ ಮಾಡುವುದಕ್ಕಾಗಿ ಶುದ್ಧವಾದ ಪ್ರೇಮ, ಸತ್ಯ, ನ್ಯಾಯ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ಶಿಸ್ತು, ವಿನಯ, ಶುದ್ಧತೆ, ನಿಸ್ವಾರ್ಥ ಸೇವೆ, ಧೈರ್ಯ, ದೇಶಭಕ್ತಿ, ಮತ್ತು ಭಗವದ್ಭಕ್ತಿ ಎಂಬ ಮೌಲ್ಯಗಳನ್ನು ಬೆಳೆಸಬೇಕು. ಈ ಮೌಲ್ಯಗಳನ್ನು ಬೋಧಿಸುವ ಕಾರ್ಯದಲ್ಲಿ ಉಪಾಧ್ಯಾಯರು ಆದರ್ಶಯುತ ಜೀವನವನ್ನು ತೋರಿಸಬೇಕು, ಪಾಠವು ಅನುಭವಾಧಾರಿತ, ರಸಪೂರ್ಣವಾಗಿರಬೇಕು. ವಿದ್ಯಾರ್ಥಿಗಳು ಶಾಂತಿ, ಅಶಾಂತಿ, ಅತೃಪ್ತಿ, ಮುಂತಾದ ಮಾನಸಿಕ ಅಸಮತೋಲನದಿಂದ ಮುಕ್ತರಾಗಬೇಕು. ಅವರ ಮನಸ್ಸಿನಲ್ಲಿ ಪ್ರೇಮ, ಸತ್ಯ, ನ್ಯಾಯ, ಕರ್ತವ್ಯನಿಷ್ಠೆ, ಶಿಸ್ತು, ವಿನಯ, ಶುದ್ಧತೆ, ನಿಸ್ವಾರ್ಥ ಸೇವೆ, ಧೈರ್ಯ, ದೇಶಭಕ್ತಿ, ಮತ್ತು ಭಗವದ್ಭಕ್ತಿ ಬೆಳೆಸಬೇಕು.

**ವಿದ್ಯಾರ್ಥಿಗಳ ಮುಷ್ಕರ ಮತ್ತು ಗೊಂದಲ:** ದೇಶದ ಹಲವು ಭಾಗಗಳಲ್ಲಿ ವಿದ್ಯಾರ್ಥಿಗಳ ಮುಷ್ಕರಗಳು ಸಾಮಾನ್ಯವಾಗಿವೆ. ಕೆಲವೊಂದು ಸಂದರ್ಭಗಳಲ್ಲಿ ನಿಜವಾದ ನ್ಯಾಯಸಮ್ಮತ ಕಾರಣಗಳಿದ್ದರೆ ಬಹುತೇಕ ಮುಷ್ಕರಗಳು ಆಕಾಂಕ್ಷೆ, ಸುಖಲೋಭ, ಪರೀಕ್ಷೆಯಲ್ಲಿ ಪಾಸ್ ಆಗದೆ ಹೋದದ್ದು ಅಥವಾ ಇಚ್ಛಿತ ಸೌಲಭ್ಯಗಳ ಕೊರತೆಗಳಿಂದ ಉಂಟಾಗುತ್ತದೆ. ಕೆಲವರು ರಾಜಕೀಯ ಉದ್ದೇಶಗಳಿಗಾಗಿ ವಿದ್ಯಾರ್ಥಿಗಳನ್ನು ಸಂಘಟಿಸುವುದರಿಂದ ಈ ಚಳುವಳಿಗಳ ಹಿನ್ನೆಲೆಯಲ್ಲಿ ನೈತಿಕ ಕೊರತೆಗಳು ಕಾಣಿಸಿಕೊಳ್ಳುತ್ತವೆ. ಮುಷ್ಕರಗಳು, ಶಕ್ತಿ ಪ್ರದರ್ಶನಗಳು, ಹಲ್ಲೆ ಸೃಷ್ಟಿ ಮುಂತಾದವುಗಳಿಂದ ಯಾವುದೇ ಫಲ ಶೃತಿಯೇ ಇಲ್ಲ. ಕಾರಣವು ವಿದ್ಯಾರ್ಥಿಗಳಲ್ಲಿ ಸರಿಯಾದ ನೈತಿಕ, ಧಾರ್ಮಿಕ, ಶೈಕ್ಷಣಿಕ, ಮತ್ತು ಪಾರಮಾರ್ಥಿಕ ಮಾರ್ಗದರ್ಶನದ ಕೊರತೆಯಲ್ಲಿದೆ. ಅವರು ತಮ್ಮ ವಿದ್ಯಾಭ್ಯಾಸ ಮತ್ತು ರಾಷ್ಟ್ರ ಸೇವೆಗೆ ಅಗತ್ಯವಾದ ತಜ್ಞತೆ, ಶ್ರಮ, ಕರ್ತವ್ಯಪರತೆ ಮತ್ತು ಆದರ್ಶಗಳನ್ನು ಹೊಂದಿಲ್ಲ. ಸಮಸ್ಯೆಯ ಮೂಲಕ್ಕೆ ಹೋಗುವುದಕ್ಕೆ ವಿದ್ಯಾರ್ಥಿಗಳಿಗೆ ಶಿಕ್ಷಕರು, ಪ್ರಾಧ್ಯಾಪಕರು ನೈತಿಕವಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕು.

**ವಿದ್ಯಾರ್ಥಿ ಆದರ್ಶ:** ಆದರ್ಶ ವಿದ್ಯಾರ್ಥಿ ಕೇವಲ ಪಾಸ್ ಆಗುವುದರಲ್ಲಿ ತೃಪ್ತಿಪಡುವುದಿಲ್ಲ; ಜ್ಞಾನಾರ್ಜನೆ ಮುಖ್ಯ. ಗಣಿತ, ವಿಜ್ಞಾನ, ಇತಿಹಾಸ, ಭಾಷೆಗಳಲ್ಲಿ ಅರಿವು ಹೊಂದಿ ಹಿಂದಿನ ಸಂಶೋಧನೆಗಳನ್ನೆಲ್ಲಾ ತಿಳಿದು, ಅವುಗಳನ್ನು ಮುಂದುವರಿಸಲು ಪ್ರಯತ್ನಿಸಬೇಕು. ಜ್ಞಾನವನ್ನು ಬೋಧನೆಗೆ, ಭಾವನೆಗಳನ್ನು

ಸರಿಯಾದ ರೀತಿಯಲ್ಲಿ ವ್ಯಕ್ತಪಡಿಸಲು ಬಳಸಬೇಕು. ದೈಹಿಕ ಆರೋಗ್ಯ ಮತ್ತು ನೈತಿಕತೆ ಮಹತ್ವಪೂರ್ಣ; ದೇಹವೇ ಸಾಧನೆಯ ಮೂಲ, ನೀತಿ ಮತ್ತು ಶ್ರದ್ಧೆ ಸಮಾಜದ ಸ್ಥಿರತೆಯನ್ನು ಕಾಪಾಡುತ್ತವೆ. ಸಂಪತ್ತು ಕೇವಲ ಭೋಗಕ್ಕಾಗಿ ಉಪಯೋಗಿಸದೆ, ತ್ಯಾಗ ಮತ್ತು ಸಮಾಜಮುಖಿ ಉದ್ದೇಶಕ್ಕೆ ಬಳಸಬೇಕು. ಪಾರಮಾರ್ಥಿಕ ಜ್ಞಾನವು ಆಂತರಿಕ ಶಾಂತಿ ಮತ್ತು ಸಮಾಜಮುಖಿ ಉದ್ದೇಶಕ್ಕೆ ಬಳಸಬೇಕು. ಪಾರಮಾರ್ಥಿಕ ಜ್ಞಾನವು ಆಂತರಿಕ ಶಾಂತಿ ಮತ್ತು ದೇವರ ಅನುಭವಕ್ಕೆ ದಾರಿ ಮಾಡುತ್ತದೆ. ಪ್ರಜೆಗಳಾಗಿ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ಪಾಲಿಸುವುದು ಅಗತ್ಯ. ಆದರ್ಶ ವಿದ್ಯಾರ್ಥಿ ಜ್ಞಾನ, ನೈತಿಕತೆ, ಶ್ರದ್ಧೆ, ಮತ್ತು ಕರ್ತವ್ಯಪರತೆಯನ್ನು ಬೆಳೆಸಿಕೊಂಡು, ಸಮಗ್ರ ವ್ಯಕ್ತಿತ್ವವಿರುವ ವ್ಯಕ್ತಿಯಾಗಿ ರೂಪುಗೊಳ್ಳಬೇಕು.

ಈ ಕೃತಿ ಶ್ರೀ ಮಡಿಯಾಲ ನಾರಾಯಣ ಭಟ್ಟರ ಶಿಕ್ಷಣ ಚಿಂತನೆಗಳ ಸಂಗ್ರಹವಾಗಿದ್ದು, ಶೀಲ ಮತ್ತು ಸಂಸ್ಕೃತಿಯುಕ್ತ ಶಿಕ್ಷಣದ ಮಹತ್ವವನ್ನು ಒತ್ತಿಹೇಳುತ್ತದೆ. ಲೇಖಕರ ಪ್ರಕಾರ, ದೇಶದ ಪ್ರಗತಿ ಮತ್ತು ಭ್ರಷ್ಟಾಚಾರದ ನಿರ್ವಹಣೆಗೆ ಅತ್ಯುತ್ತಮ ಉಪಾಧ್ಯಾಯರು ಅನಿವಾರ್ಯ, ಏಕೆಂದರೆ ಇವರೇ ವಿದ್ಯಾರ್ಥಿಗಳಲ್ಲಿ ನೈತಿಕತೆ, ದೇಶಪ್ರೇಮ ಮತ್ತು ಸನಾತನ ಸಂಸ್ಕೃತಿಯ ಮೌಲ್ಯಗಳನ್ನು ಬಿತ್ತುವ 'ರಾಷ್ಟ್ರಶಿಲ್ಪಿಗಳು' ಉತ್ತಮ ಉಪಾಧ್ಯಾಯರು ದೊರೆಯಲು ಅವರಿಗೆ ಯೋಗ್ಯವೇತನ ಮತ್ತು ಸಾಮಾಜಿಕ ಗೌರವ ಬೇಕು, ಹಾಗೆಯೇ ಆರ್ಥಿಕ ಸಮಸ್ಯೆಗಳಿಲ್ಲದ ಶ್ರೀಮಂತ ಅಥವಾ ಮಧ್ಯಮ ವರ್ಗದ ಯುವಕರು ಇದನ್ನು ಪವಿತ್ರ ಸೇವೆ ಎಂದು ಭಾವಿಸಿ ಈ ವೃತ್ತಿಗೆ ಬರಬೇಕು. ಉಪಾಧ್ಯಾಯರು ಮಕ್ಕಳ ಮೇಲೆ ಪ್ರೇಮ, ಸಹಾನುಭೂತಿ ಮತ್ತು ಕ್ಷಮೆಯನ್ನು ತೋರಿಸಿ, ಆದರ್ಶಯುತ ಜೀವನವನ್ನು ನಡೆಸಬೇಕು. ವಿದ್ಯಾರ್ಥಿಗಳು ಗುರುಭಕ್ತಿ, ಶಿಸ್ತು, ಸರಳಜೀವನ ಮತ್ತು ಜ್ಞಾನಾರ್ಜನೆಯ ಮೂಲಕ ರಾಷ್ಟ್ರದ ನವನೀತವಾಗಿ ಬೆಳೆಯಬೇಕು ಎಂಬುದೇ ಈ ಕೃತಿಯ ಮೂಲ ಆಶಯವಾಗಿದೆ.

ಭಾರತೀಯ ಶಿಕ್ಷಣ ಮತ್ತು ಅಧ್ಯಾಪಕರ ಮಹತ್ವವನ್ನು ಸಮಗ್ರವಾಗಿ ವಿಶ್ಲೇಷಿಸುತ್ತದೆ. ಉತ್ತಮ ಉಪಾಧ್ಯಾಯನು ಕೇವಲ ಪಾಠಬೋಧಕನಲ್ಲ, ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೈತಿಕತೆ, ಸಂಸ್ಕಾರ, ದೇಶಭಕ್ತಿ ಮತ್ತು ವ್ಯಕ್ತಿತ್ವ ರೂಪಿಸುವ 'ರಾಷ್ಟ್ರಶಿಲ್ಪಿ' ಆಗಿರಬೇಕು ಎಂದು ಒತ್ತಿಹೇಳಲಾಗಿದೆ. ವಿದ್ಯಾರ್ಥಿಗಳ ಪ್ರಗತಿ, ಶಿಸ್ತು ಮತ್ತು ಜೀವನಮೌಲ್ಯಗಳ ಬೆಳವಣಿಗೆಯಲ್ಲಿ ಪ್ರೀತಿ, ಸಹಾನುಭೂತಿ, ಕ್ಷಮೆ, ಶ್ರಮ, ಜವಾಬ್ದಾರಿ ಮತ್ತು ಆದರ್ಶ ವ್ಯಕ್ತಿತ್ವ ಅತ್ಯಾವಶ್ಯಕ. ಲೇಖಕರು ವಿದ್ಯಾರ್ಥಿಗಳನ್ನು ದೇಶದ ಭವಿಷ್ಯದ ನಿರ್ಮಾಣಕರಾಗಿ ಗುರುತಿಸಿ, ಅವರ ಚೈತನ್ಯ ಮತ್ತು ಶಕ್ತಿಯನ್ನು ತಪ್ಪುದಾರಿಯಿಂದ ದೂರವಿಟ್ಟು, ಶ್ರದ್ಧಾ ಶಿಸ್ತು, ಜ್ಞಾನಾರ್ಜನೆ ಮತ್ತು ಪಾರಮಾರ್ಥಿಕ ಮಾರ್ಗದರ್ಶನದ ಮೂಲಕ ಸಮಗ್ರ ವ್ಯಕ್ತಿತ್ವವಂತರನ್ನಾಗಿ ಬೆಳೆಸುವ ಅಗತ್ಯವಿದೆ. ಶಿಕ್ಷಣವನ್ನು ಕೇವಲ ಉದ್ಯೋಗವನ್ನಾಗಿ ಪರಿಗಣಿಸುವುದನ್ನು ತೊರೆದು, ಅದನ್ನು ಪವಿತ್ರ ಸೇವೆ, ರಾಷ್ಟ್ರಸೇವೆ ಮತ್ತು ಮಾನವತೆಯ ಶಿಲ್ಪಿ ನಿರ್ಮಾಣದ ಮಾರ್ಗವಾಗಿ ನೋಡಬೇಕು ಎಂಬುದೇ ಈ ಕೃತಿಯ ಸಂದೇಶ.

## ಪರಾಮರ್ಶನ ಗ್ರಂಥಗಳು:


1. ಶ್ರೀ ಮಡಿಯಾಲ ನಾರಾಯಣ ಭಟ್, (2011), ಅಧ್ಯಾಪಕರಿಗೊಂದು ದಾರಿದೀಪ, ಅಳಿಕೆ: ಶ್ರೀ ಸತ್ಯಸಾಯಿ ಲೋಕ ಸೇವಾ ಪ್ರಕಾಶನ.
2. ಶ್ರೀ ಮಡಿಯಾಲ ನಾರಾಯಣ ಭಟ್, (1966), ಭಾರತ ದರ್ಪಣ, ಅಳಿಕೆ: ಶ್ರೀ ಸತ್ಯಸಾಯಿ ಲೋಕ ಸೇವಾ ಪ್ರಕಾಶನ.
3. ಪಟ್ಟಾಭಿರಾಮ್ ಬಿ.ವಿ., (2012), ಆದರ್ಶ ಶಿಕ್ಷಕರಾಗುವುದು ಹೇಗೆ?, ಬೆಂಗಳೂರು: ವಿಕಾಸ್ ಪ್ರಕಾಶನ.
4. ವಾಮದೇವಪ್ಪ ಎಚ್.ವಿ., (2025), ಶೈಕ್ಷಣಿಕ ಮನೋವಿಜ್ಞಾನ, ಬೆಂಗಳೂರು: ಸ್ವಪ್ನ ಪ್ರಕಾಶನ.
5. ವಿರೂಪಾಕ್ಷ ದೇವರಮನೆ, (2019), ಥ್ಯಾಂಕ್ಯೂ ಟೀಚರ್, ಬೆಂಗಳೂರು: ಸ್ವಪ್ನ ಬುಕ್ ಹೌಸ್.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.